# "ಮೈಸೂರು ನನ್ನ ಆಧ್ಯಾತ್ಮಿಕ ತವರೂರು."

–ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್

೧೯೩೬ರಲ್ಲಿ ಭಗವಾನ್ ಶ್ರೀರಾಮಕೃಷ್ಣರ ಜನ್ಮಶತಾಬ್ದಿ ಉತ್ಸವದ ಸಂದರ್ಭದಲ್ಲಿ ತೆಗೆದ ಸಾಮೂಹಿಕ ಭಾವ ಚಿತ್ರದಲ್ಲಿ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್ ಅವರು. (ವೃತ್ತದಿಂದ ಗುರುತಿಸ ಲಾಗಿದೆ). ಇದೇ ಲಭ್ಯವಿರುವ ಅವರ ಅತ್ಯಂತ ಹಳೆಯ ಭಾವಚಿತ್ರ.



"ವೇದಾಂತದ ಉದಾತ್ತ ಚಿಂತನೆಗಳನ್ನು ಎಲ್ಲೆಡೆ, ಎಲ್ಲರಿಗೆ ತಿಳಿಸಿದ ಮಹಾನ್ ಚೇತನ ಸ್ವಾಮಿ ರಂಗನಾಥಾನಂದ."
– ಡಾ. ಅಬ್ದುಲ್ ಕಲಾಂ.



ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕಾರ್ಯಕ್ರಮವೊಂದರಲ್ಲಿ ಸ್ವಾಮಿ ರಂಗನಾಥಾನಂದಜಿಯವರು. ಪೂಜ್ಯರ ಪಕ್ಕದಲ್ಲಿರುವವರು ಸ್ವಾಮಿ ಸೋಮನಾಥಾನಂದಜಿ.




ಶ್ರೀರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮವೊಂದಕ್ಕೆ ಆಗಮಿಸುತ್ತಿರುವುದು.



೧೯೯೨ರಲ್ಲಿ ವಿವೇಕಾನಂದರ ಮೈಸೂರು ಭೇಟಿಯ ಶತಾಬ್ದಿ ಆಚರಣೆಯ ಸಂದರ್ಭದಲ್ಲಿ ತೆಗೆದ ಚಿತ್ರ. ಎಡದಿಂದ: ಸ್ವಾಮಿ ಸುರೇಶಾನಂದಜಿ, ಡಾ. ಪ್ರಭುಶಂಕರ, ಡಾ. ಕರಣ್ ಸಿಂಗ್.



೧೯೭೮ರಲ್ಲಿ ಮೈಸೂರಿನಲ್ಲಿ ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣದ ಉದ್ಘಾಟನೆ ಸಮಾರಂಭದಲ್ಲಿ. ಎಡಗಡೆಯಿಂದ: ಶ್ರೀ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಸ್ವಾಮಿ ಸುರೇಶಾನಂದಜಿ.



೨೦೦೦ದ ಫೆಬ್ರವರಿ ೧೯ರಂದು ಮೈಸೂರು ರಾಮಕೃಷ್ಣ ಆಶ್ರಮಕ್ಕೆ ಆಗಮಿಸುತ್ತಿರುವುದು.



೨೦೦೦ದ ಫೆಬ್ರವರಿ ೨೦ರಂದು ನಡೆದ ಸಮಾರಂಭದಲ್ಲಿ ಪುಸ್ತಕವೊಂದರ ಬಿಡುಗಡೆ. ಎಡಗಡೆಯಿಂದ: ಡಾ. ಡಿ.ವಿ. ಸಂಜೀವಪ್ಪ ಮತ್ತು ಸ್ವಾಮಿ ಆತ್ಮವಿದಾನಂದಜಿ.

"೧೯ನೇ ಶತಮಾನದ ದ್ವಿತೀಯಾರ್ಧದಲ್ಲಿ ಸ್ವಾಮಿ ವಿವೇಕಾನಂದರು ಏನನ್ನು ಸಾಧಿಸಿದ್ದರೋ ಅದನ್ನೇ ಸ್ವಾಮಿ ರಂಗನಾಥಾನಂದರು ೨೦ನೇ ಶತಮಾನದ ಎರಡನೇ ಭಾಗದಲ್ಲಿ ಸಾಧಿಸಿದರು. ವಿವೇಕಾನಂದರಂತೆಯೇ ರಂಗನಾಥಾನಂದರೂ ಪ್ರಖರ ಚಿಂತಕರು. ಬೌದ್ಧಿಕವಾಗಿ ಅತ್ಯುನ್ನತ ಮಟ್ಟದಲ್ಲಿದ್ದ ಅವರಿಂದ ಹೊಸ ಹೊಸ ಆಲೋಚನೆಗಳು ಹರಿದು ಬರುತ್ತಲೇ ಇದ್ದವು." – ಟಿ.ಜೆ.ಎಸ್.ಜಾರ್ಜ್. ( ಕನ್ನಡ ಪ್ರಭ ಪತ್ರಿಕೆ )

# " ಮೈಸೂರಿಗೆ ಬರುವುದೆಂದರೆ 'ಮನೆಗೆ ಬಂದಂತೆ' "

**–ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್**

೨೦೦೦ನೇ ಇಸವಿ ಫೆಬ್ರವರಿ ೨೨ರಂದು ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸುವರ್ಣಮಹೋತ್ಸವ ಕಟ್ಟಡದ ಶಂಕುಸ್ಥಾಪನೆಯ ಸಮಾರಂಭದ ದೃಶ್ಯ. ಎಡಗಡೆಯಿಂದ: ಸ್ವಾಮಿ ಮುಕ್ತಿದಾನಂದಜಿ, ಪ್ರಾಂಶುಪಾಲರಾದ ಶ್ರೀ ಬಾಲಾಜಿ, ಸ್ವಾಮಿ ಸುರೇಶಾನಂದಜಿ ಮತ್ತು ಕರ್ನಾಟಕದ ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣ ಮತ್ತು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ.




'ಧರ್ಮವನ್ನು ಜೀವನದ ದರ್ಶನವಾಗಿಸಿಕೊಂಡು ಧರ್ಮವನ್ನು ಆಚರಿಸಿ, ವಿಶ್ಲೇಷಿಸಿದವರು ಸ್ವಾಮಿ ರಂಗನಾಥಾನಂದರು. ಗೊಡ್ಡು ಆಚರಣೆಗಳು ಎಂದೂ ಅವರನ್ನು ಹಿಡಿದಿಡಲಿಲ್ಲ '
–ಲಾಲ್ ಕೃಷ್ಣ ಅಡ್ವಾಣಿ.







ಶ್ರೀರಾಮಕೃಷ್ಣ ವಿದ್ಯಾಶಾಲೆಯ ಸುವರ್ಣಮಹೋತ್ಸವ ಕಟ್ಟಡದ ಶಂಕುಸ್ಥಾಪನೆಯ ಸಂದರ್ಭದಲ್ಲಿ ನಡೆದ ಸಮಾರಂಭದ ವಿವಿಧ ದೃಶ್ಯಗಳು.



೨೦೦೧ರ ಮಾರ್ಚ್ ತಿಂಗಳಿನಲ್ಲಿ ಪೂಜ್ಯರು ಮೈಸೂರಿಗೆ ಆಗಮಿಸುತ್ತಿರುವುದು.



ಮೈಸೂರು ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮವಿದಾನಂದಜಿ ಪೂಜ್ಯರಿಗೆ ಮಾಲಾರ್ಪಣೆ ಮಾಡುತ್ತಿರುವುದು.



೨೦೦೧, ಮಾರ್ಚ್ ೩೧ರಂದು 'ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು' ಗ್ರಂಥದ ೪ನೇ ಸಂಪುಟದ ಬಿಡುಗಡೆ. ಎಡಗಡೆಯಿಂದ: ಸ್ವಾಮಿ ಸುರೇಶಾನಂದಜಿ, ಡಾ. ಆ.ರಾ.ಮಿತ್ರ.

**ನಮ್ಮೊಡನಿದ್ದ ಆಧುನಿಕ ಕಾಲದ ಅತ್ಯಂತ ಪೂಜ್ಯ ಆಚಾರ್ಯರೊಬ್ಬರನ್ನು ನಾವು ಕಳೆದುಕೊಂಡಿದ್ದೇವೆ. ಜಗತ್ತು ಇಂದು ಸಂನ್ಯಾಸದ ನಿಜವಾದ ಅರ್ಥದಲ್ಲಿ ಅದರ ಎಲ್ಲ ಆಯಾಮಗಳಲ್ಲಿ ಜೀವನ ನಡೆಸಿದ ಮಹಾವ್ಯಕ್ತಿಯನ್ನು ಕಳೆದುಕೊಂಡಿದೆ. –ಡಾ. ಮನಮೋಹನ್ ಸಿಂಗ್.**

**"ಮನುಷ್ಯನಿರ್ಮಾಣಕಾರಿ, ರಾಷ್ಟ್ರನಿರ್ಮಾಣಕಾರಿ ಭಾವನೆಗಳನ್ನು ಜನರಲ್ಲಿ ಹರಡುವ ಕಾರ್ಯದಲ್ಲಿ ವಿವೇಕಪ್ರಭವು ಒಂದು ಸಾಧನವಾಗುತ್ತದೆ."**

**–ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್**



ಮಾರ್ಚ್ ೨೬, ೨೦೦೩ರಂದು ಬೆಳಿಗ್ಗೆ ಮೈಸೂರು ರಾಮಕೃಷ್ಣ ಆಶ್ರಮಕ್ಕೆ ಆಗಮಿಸುತ್ತಿರುವುದು. ಇದು ಮೈಸೂರಿಗೆ ಪೂಜ್ಯರು ನೀಡಿದ ಕಡೆಯ ಭೇಟಿ.



ಪೂಜ್ಯರು ಮೈಸೂರಿಗೆ ನೀಡಿದ ಅಂತಿಮ ಭೇಟಿಯಲ್ಲಿ ಕಂಡುಬಂದ ಸಂತೃಪ್ತ ಮುಖಭಾವ.




ಪೂಜ್ಯರು ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ತಾವು ಕಳೆದ ದಿನಗಳ ಅನುಭವಗಳನ್ನು ಹಿರಿಯ ಸಾಧುಗಳಿಗೆ ವಿವರಿಸುತ್ತಿರುವುದು.

ಸಂನ್ಯಾಸಿ ಎಂದಾಕ್ಷಣ ಅನೇಕರ ಮನಸ್ಸಿನಲ್ಲಿ ಮೂಡುವ ಚಿತ್ರಕ್ಕಿಂತ ವಿಶೇಷವಾಗಿದ್ದರು ಸ್ವಾಮಿ ರಂಗನಾಥಾನಂದರು. ಅವರು ಅಸಾಧ್ಯ ಮೇಧಾವಿ. ಓದು, ಬರಹ, ಚರ್ಚೆಗಳಲ್ಲಿ ಆಸಕ್ತರಾಗಿರುವವರು ಅನೇಕ ವೇಳೆ ಮಾನವರಿಂದ ಬೇರ್ಪಟ್ಟು, ಜನರೊಂದಿಗೆ ಸಂಪರ್ಕ ಕಳೆದುಕೊಂಡುಬಿಡುತ್ತಾರೆ. ಇವರು ಹಾಗೆಂದಿಗೂ ಆಗಿರಲಿಲ್ಲ. – ಇಂದ್ರಕುಮಾರ್ ಗುಜ್ರಾಲ್.

ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಒಂದು ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸುವುದು ಹಾಗೂ ಸ್ವಾಮಿ ವಿವೇಕಾನಂದರ ಜನ್ಮಸ್ಥಾನದ ಪುನರುಜ್ಜೀವನ––ಇವು ಸ್ವಾಮಿ ರಂಗನಾಥಾನಂದರು ಬಯಸಿದ್ದ ಎರಡು ಮಹತ್ಕಾರ್ಯಗಳು. ಅವು ಪೂರ್ಣವಾದವು. ಅವರ ಕನಸು ನನಸಾಯಿತು.
–ಪ್ರೊ. ಶಂಕರಿ ಪ್ರಸಾದ್ ಬಸು.



೯, ಆಗಸ್ಟ್ ೧೯೪೭ರಂದು ಕರಾಚಿಯನ್ನು ಬಿಡುವ ಸಂದರ್ಭದಲ್ಲಿ ವಿಮಾನ ನಿಲ್ದಾಣದಲ್ಲಿ ತೆಗೆದ ಚಿತ್ರ



ಪೂಜ್ಯರ ಒಂದು ಹಳೆಯ ಚಿತ್ರ, ಕೆಳಗಡೆ ಅವರ ಹಸ್ತಾಕ್ಷರವಿದೆ.




ರಾಮಕೃಷ್ಣ ಮಹಾಸಂಘದ ೧೨ನೆಯ ಮಹಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಭೂತೇಶಾನಂದಜಿ ಮಹಾರಾಜರೊಂದಿಗೆ ೧೯೯೨ರಲ್ಲಿ ಚೆನ್ನೈನಲ್ಲಿ ಸಂವಾದದಲ್ಲಿ ಪೂಜ್ಯರು.

"ರಾಮಕೃಷ್ಣ–ವಿವೇಕಾನಂದ ಮತ್ತು ವೇದಾಂತದ ಭಾವನೆಗಳನ್ನು ಹಾಗೂ ಆಧುನಿಕ ವೈಜ್ಞಾನಿಕ ಭಾವನೆಗಳನ್ನು ಎಲ್ಲೆಲ್ಲಿಯೂ ಪಸರಿಸುವ ಕಾರ್ಯದಲ್ಲಿ ವಿವೇಕಪ್ರಭವು ಯಶಸ್ವಿಯಾಗಲೆಂದು ನಾನು ಪ್ರೀತಿಪೂರ್ವಕವಾಗಿ ಆಶೀರ್ವದಿಸುತ್ತೇನೆ"

–ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಮಹಾರಾಜ್



ಬೇಲೂರು ಮಠದಲ್ಲಿ ನಡೆದ ಶ್ರೀಮಾತೆ ಶಾರದಾದೇವಿಯವರ ೧೫೦ನೇ ಜಯಂತಿ ಉತ್ಸವದ ಸಮಾರೋಪ ಸಮಾರಂಭದಲ್ಲಿ ಪೂಜ್ಯರು. ಇದು ಅವರು ಭಾಗವಹಿಸಿದ ಅಂತಿಮ ಪ್ರಮುಖ ಕಾರ್ಯಕ್ರಮವಾಗಿತ್ತು.



ಗುರುಚರಣಾಂಬುಜ – ನಿರ್ಭರ – ಭಕ್ತಃ ಸಂಸಾರಾದಚಿರಾದ್ಭವ – ಮುಕ್ತಃ

ಗುರುವಿನ ಪಾದಪದ್ಮಗಳನ್ನು ಆಶ್ರಯಿಸಿದ ಭಕ್ತನು ಸಂಸಾರ ಸಾಗರವನ್ನು ಸುಲಭವಾಗಿ ದಾಟುತ್ತಾನೆ.

ಕೆಲಸವನ್ನು ಮಾತ್ರ ಶ್ರದ್ಧೆಯಿಂದ ಮಾಡುತ್ತಿದ್ದೆ. ಅಲ್ಲದೆ ನನ್ನ ಸ್ವಭಾವಕ್ಕೆ ಹೋಲಿಸಿದರೆ ವೇಗವಾಗಿಯೇ ಮಾಡುತ್ತಿದ್ದೆ. ಆದರೆ ವೇಗ ಸಾಲದು ಎಂಬುದು ಸ್ವಾಮೀಜಿಯ ಭಾವನೆಯಾಗಿತ್ತು. ಅವರು ಮದರಾಸಿನಲ್ಲಿ ನನ್ನ ತಮ್ಮ ಸ್ವಾಮಿ ರಾಘವೇಶಾನಂದರು ಸಿಕ್ಕಿದಾಗ "ಏನು, ನಿಮ್ಮಣ್ಣ ಯಾವಾಗ ಅನುವಾದ ಮುಗಿಸುತ್ತಾರೆ? ನನಗೇನೋ ಅವರು ಮಾಡುತ್ತಿರುವ ವೇಗದಲ್ಲಿ ಅದನ್ನು ಮುಗಿಸುವುದಿಲ್ಲ ಎಂದೇ ತೋರುತ್ತದೆ" ಎಂದರಂತೆ. ರಾಘವೇಶಾನಂದರು—ಆಗಿನ್ನೂ ಅವರಿಗೆ ಸನ್ಯಾಸದೀಕ್ಷೆ ಆಗಿರಲಿಲ್ಲ ಎಂದೇ ತೋರುತ್ತದೆ, ಸರಿಯಾಗಿ ನೆನಪಿಲ್ಲ—ನನಗೆ ರಂಗನಾಥಾನಂದರ ಮಾತುಗಳನ್ನು ಯಥಾವತ್ತಾಗಿ ತಿಳಿಸಿದರು. ನಾನು ಏನೂ ಉತ್ತರ ಹೇಳದೆ ಅನುವಾದ ಕಾರ್ಯವನ್ನು ಮುಂದುವರಿಸಿದ್ದೆ. ಸ್ವಾಮೀಜಿ ಒಮ್ಮೆ ಮೈಸೂರಿಗೆ ಬಂದರು. ಯಥಾಪ್ರಕಾರ ಅನುವಾದದ ಬಗ್ಗೆ ಕೇಳಿದರು. ನಾನು ಎಷ್ಟು ಕೆಲಸ ಮುಗಿದಿದೆ ಎಂದು ಹೇಳಿದೆ. ಅವರಿಗೆ ಸಮಾಧಾನವಾಗಲಿಲ್ಲ. ಹೇಳಿದರು: 'ನೋಡಯ್ಯ, ಒಬ್ಬ ವಿದ್ವಾಂಸರು ಹಿಂದಿಗೆ ಈ ಪುಸ್ತಕವನ್ನು ಅನುವಾದ ಮಾಡುತ್ತಿದ್ದಾರೆ. ಇನ್ನೇನು ಮುಗಿಸಿಬಿಡುತ್ತಾರೆ. ಕನ್ನಡ ಅನುವಾದ ಮಾತ್ರ ಹಿಂದೆ ಬೀಳುತ್ತದೆ." ಯಾವ ಧೈರ್ಯದ ಮೇಲೋ ನಾನು "ಸ್ವಾಮೀಜಿ, ನೋಡುತ್ತಿರಿ, ಕನ್ನಡ ಅನುವಾದ ಮೊದಲು ಹೊರಬೀಳುತ್ತದೆ." ಅವರು ನಂಬಿದರೋ, ಬಿಟ್ಟರೋ, ನಿಜವಾಗಿ ಕನ್ನಡ ಅನುವಾದ ಪ್ರಕಟವಾದಾಗ ಹಿಂದೀ ಅನುವಾದ ಇನ್ನೂ ಅರ್ಧದಷ್ಟೂ ಮುಗಿದಿರಲಿಲ್ಲ!

ಈ ಸಂದರ್ಭದಲ್ಲಿ ನನಗೆ ಆಶ್ಚರ್ಯವಾದ ವಿಷಯ ಎಂದರೆ ಅನುವಾದದ ಕರಡು ಪ್ರತಿಯ ಹಾಳೆಗಳನ್ನು ಆಸಕ್ತಿಯಿಂದ ತಿರುವಿಹಾಕುತ್ತಾ ಸ್ವಾಮೀಜಿ ಅನೇಕ ಉಪಯುಕ್ತವಾದ ಬದಲಾವಣೆಗಳನ್ನು ಸೂಚಿಸಿದ್ದು! ಅವರು ತಮ್ಮ ವ್ಯಕ್ತಿತ್ವ ರೂಪುಗೊಳ್ಳುವ ವಯಸ್ಸಿನಲ್ಲಿ ಬಹುಕಾಲ ಕನ್ನಡನಾಡಿನಲ್ಲಿದ್ದದ್ದು, ಶ್ರೀ ಕುವೆಂಪು, ಶ್ರೀ ಕಸ್ತೂರಿ ಮುಂತಾದವರ ಸಂಪರ್ಕ ಹೊಂದಿದ್ದು ಅವರ ಕೃತಿಗಳಲ್ಲಿ ಕೆಲವು ಭಾಗವಾದರೂ ಸ್ವಾಮೀಜಿಯ ಕಿವಿಯ ಮೇಲೆ ಬಿದ್ದದ್ದು ಸಾರ್ಥಕವಾಯಿತು ಎನ್ನಿಸಿತು. ಅವರ ಸಲಹೆ ಸೂಚನೆಗಳಿಂದ ನನ್ನ ಅನುವಾದದ ಮೌಲ್ಯವೂ ಹೆಚ್ಚಿತು. ಪ್ರಕಟಿತ ಪುಸ್ತಕವನ್ನು—'ಉಪನಿಷತ್ತುಗಳ ಸಂದೇಶ'—ಕೈಯಲ್ಲಿ ಹಿಡಿದುಕೊಂಡು ಅವರು ಪಟ್ಟ ಸಂತೋಷ ನನ್ನ ಸಂತೋಷವನ್ನು ಇಂದಿಗೂ ಹೊಚ್ಚಹೊಸದಾಗಿ ಇರಿಸಿದೆ.

ಪುಸ್ತಕ ಪ್ರಕಟಣೆಗೆ ಸಂಬಂಧಿಸಿದಂತೆ ಹೇಳಬೇಕಾದ ಇನ್ನೂ ಒಂದು ಅಂಶವುಂಟು. ನಾನು ಪ್ರಸಾರಾಂಗದ ನಿರ್ದೇಶಕನಾಗಿದ್ದ ಅವಧಿಯಲ್ಲಿ ರಾಮಕೃಷ್ಣ ಮಿಷನ್ನಿನವರು ಅಲ್ಲಿಯವರೆಗೆ ಪ್ರಕಟಿಸಿದ್ದ *The Cultural Heritage of India* ಗ್ರಂಥದ ಐದೂ ಸಂಪುಟಗಳನ್ನು ಪ್ರಸಾರಾಂಗವು ಪ್ರಕಟಿಸಬೇಕು ಎಂದು ತೀರ್ಮಾನವಾಯಿತು. ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಿಂದ ಅದಕ್ಕೆ ಒಪ್ಪಿಗೆ ಪಡೆಯಬೇಕಾಗಿತ್ತು. ಆಗ ಆ ಸಂಸ್ಥೆಯ ಮುಖ್ಯಸ್ಥರಾಗಿದ್ದವರು ಸ್ವಯಂ ಸ್ವಾಮಿ ರಂಗನಾಥಾನಂದರೇ! ವಿಶ್ವವಿದ್ಯಾನಿಲಯದ ಪರವಾಗಿ ಅವರಿಗೆ ಪತ್ರ ಬರೆದು ಅನುಮತಿ ಬೇಡಿದಾಗ ಅವರು ಬರೆದ ಉತ್ತರದ ಸಾರಾಂಶ: "ನಮ್ಮ ಸಂಸ್ಥೆಯವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಮೂಲಗ್ರಂಥಕ್ಕಿಂತ ಹೆಚ್ಚು ಅಂದವಾಗಿ, ಹೆಚ್ಚು ಆಕರ್ಷಕವಾಗಿ ಪ್ರಕಟಿಸುವುದಾದರೆ ಮಾತ್ರ ನಿಮಗೆ ಅನುಮತಿ ನೀಡಲಾಗುವುದು!" ನಾನು ಧೈರ್ಯವಾಗಿ ಒಪ್ಪಿಕೊಂಡೆ. ವಾಸ್ತವವಾಗಿ, ಮಣಿಪಾಲ್ ಪ್ರೆಸ್ಸಿನವರು ಮುದ್ರಿಸಿರುವ ಆ ಸಂಪುಟಗಳು ಮೂಲಕ್ಕಿಂತ ಎಷ್ಟೋ ಅಂದವಾಗಿ, ಆಕರ್ಷಕವಾಗಿ ಮುದ್ರಿತವಾಗಿವೆ. ಅವು ಮೈಸೂರು ವಿಶ್ವವಿದ್ಯಾನಿಲಯದ ಹೆಮ್ಮೆಯ ಪ್ರಕಟಣೆಗಳಾಗಿವೆ. ಆ ಸಂಪುಟಗಳ ಮಾಲಿಕೆಗೆ ನಾಮಕರಣ ಮಾಡಿದವರು ಯಾರೆಂದು ಹೇಳುವುದೂ ಪುಣ್ಯಸ್ಮರಣೆಯಾಗುತ್ತದೆ. ಸ್ವಾಮಿ ರಂಗನಾಥಾನಂದರ ಆಪ್ತ ಮಿತ್ರರೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಪ್ರಕಟಣ ಸಮಿತಿಯ ಅಧ್ಯಕ್ಷರೂ, ರಾಮಕೃಷ್ಣ ಪರಮಹಂಸರ ಪರಮ ಭಕ್ತರೂ, ರಾಷ್ಟ್ರಕವಿಯೂ ಆಗಿದ್ದ ಶ್ರೀ ಕುವೆಂಪು ಅವರು! ಅವರ ಕವಿಮನೋಲೋಕದ ಧ್ಯಾನದಿಂದಲೂ ಪ್ರತಿಭಾಸ್ಪರ್ಶದಿಂದಲೂ ದೊರೆತ ಹೆಸರೆಂದರೆ, **ಯುಗಯಾತ್ರೀ ಭಾರತೀಯ ಸಂಸ್ಕೃತಿ**. ಆ ದಿವ್ಯನಾಮವನ್ನು ಹೊತ್ತ ಸಂಪುಟಗಳನ್ನು, ನಾವು ಅತ್ಯಂತ ಕಡಮೆ ಬೆಲೆ ಇಟ್ಟಿದ್ದರೂ, ಅಲ್ಲಿನ ವಿಷಯ ಪ್ರತಿಯೊಬ್ಬ ಭಾರತೀಯನಿಗೂ ತಿಳಿದಿರಬೇಕಾದದ್ದಾದರೂ, ಹೆಚ್ಚಿನ ಕನ್ನಡಿಗರು ಅದನ್ನು ಕೊಳ್ಳಲಿಲ್ಲ ಎಂಬುದು ಬೇಸರದ ಸಂಗತಿ. ಇರಲಿ. ಹೇಳಬೇಕಾದ ಇನ್ನೂ ಒಂದು ವಿಷಯವೆಂದರೆ ಕನ್ನಡವನ್ನು ಬಿಟ್ಟು ಬೇರಾವ ಭಾರತೀಯ ಭಾಷೆಗೂ ಅಂತಹ ಅಮೂಲ್ಯ ಗ್ರಂಥರತ್ನಗಳು ಅನುವಾದವಾಗಿಲ್ಲ. ಇಂಥ ಅನೇಕ ಮೊದಲುಗಳನ್ನು ಕನ್ನಡ ಸಾಧಿಸಿದೆ.

ಸ್ವಾಮೀಜಿಗೆ ಇಂದಿರಾಗಾಂಧಿ ರಾಷ್ಟ್ರೀಯ ಪ್ರಶಸ್ತಿ ದೊರಕಿತಷ್ಟೆ. ಅವರು ಅದನ್ನು ತಮ್ಮ ಸಾಧನೆಗೆ ಬಂದ ಪ್ರಶಸ್ತಿ ಎಂದು ಭಾವಿಸಲು, ಹಾಗೆಂದು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಬದಲಿಗೆ ರಾಮಕೃಷ್ಣ ಮಹಾಸಂಘಕ್ಕೆ ಸಂದ ಗೌರವ ಎಂದು ಭಾರತ ಸರ್ಕಾರ ಬದಲಾಯಿಸಲು ಒಪ್ಪಿದಾಗ ಸಂಘದ ಪರವಾಗಿ ಅದನ್ನು ಸ್ವೀಕರಿಸಿದರು. ಆ ಸಂದರ್ಭದಲ್ಲಿ ಅವರು ಹೈದರಾಬಾದಿನಲ್ಲಿದ್ದರು ಎಂದು ನನ್ನ ನೆನಪು. ಅವರು ಮೈಸೂರಿಗೆ ಬಂದಾಗ ಆಕಾಶವಾಣಿಯವರು ಅವರನ್ನು ಸಂದರ್ಶಿಸಲು ಏರ್ಪಾಡಾಗಿತ್ತು. ಸಂದರ್ಶಕ ನಾನೇ.

ಮೈಸೂರಿಗೆ ಬಂದೊಡನೆ ಸ್ವಾಮೀಜಿ ಬಯಸಿದಂತೆ ಸ್ವಾಮಿ ಸುರೇಶಾನಂದರು ಮತ್ತು ನಾನು ಸ್ವಾಮೀಜಿಯವ ರನ್ನು ಕರೆದುಕೊಂಡು ಮೊದಲು ಶ್ರೀ ಕುವೆಂಪು ಅವರ ಮನೆಗೆ ಹೋದೆವು. ಇಬ್ಬರೂ ತುಂಬ ಹಳೆಯ ಸ್ನೇಹಿತರು. ರಂಗನಾಥಾನಂದರು ಮೈಸೂರಿನಲ್ಲಿ ತಾನೇ ರಾಮಕೃಷ್ಣ ಆಶ್ರಮಕ್ಕೆ ಸೇರಿದ್ದು. ತರುಣ ಪುಟ್ಟಪ್ಪನವರೂ ಅದೇ ಆಶ್ರಮದಲ್ಲಿ ವಾಸಿಸುತ್ತಿದ್ದರು. ಇಬ್ಬರೂ ವಾಲೀಬಾಲ್ ಆಟದಲ್ಲಿ ಭಾಗಿಗಳಾಗುತ್ತಿದ್ದರಂತೆ. ಅಂದಿಗೆ ಬರಿಯ ಎಸ್.ಎಸ್.ಎಲ್.ಸಿ (ಸ್ಕೂಲ್ ಫೈನಲ್ ಪರೀಕ್ಷೆ) ಪಾಸು ಮಾಡಿ ಬಂದು ಆಶ್ರಮಕ್ಕೆ ಸೇರಿದ್ದ ಸಾಧಾರಣ ವ್ಯಕ್ತಿ—ಶಂಕರನ್—ಮುಂದೆ ಸ್ವಾಮಿ ರಂಗನಾಥಾನಂದರಾಗಿ, ಅಪಾರವಾದ ಪಾಂಡಿತ್ಯವನ್ನು ಗಳಿಸಿ, ಜಗದ್ವಿಖ್ಯಾತ ವಾಗ್ಮಿ ಯಾದುದನ್ನು ಕುರಿತು ಮಾತನಾಡುತ್ತಾ ಕುವೆಂಪು ನನಗೆ ಹೇಳಿದರು: "ಯಾವ ಪವಾಡವನ್ನೂ ಮಾಡಲೊಪ್ಪದ, ಪವಾಡಗಳನ್ನು ಮನಸ್ಸಿನ ಆಳದಿಂದ ದ್ವೇಷಿಸುತ್ತಿದ್ದ ಶ್ರೀರಾಮಕೃಷ್ಣರು ಮಾಡಿದ ಬಹು ದೊಡ್ಡ ಪವಾಡ ಎಂದರೆ ಶಂಕರ ಮೆನನ್ ಅವರನ್ನು ಇಂದಿನ ಸ್ವಾಮಿ ರಂಗನಾಥಾ ನಂದರನ್ನಾಗಿ ಮಾಡಿದ್ದು!" ಕುವೆಂಪು ಅವರ ವಿಷಯ ದಲ್ಲೂ ರಂಗನಾಥಾನಂದರಿಗೆ ಅಪಾರವಾದ ಪ್ರೀತಿ. ಹೀಗೆ ಇಬ್ಬರು ಪರಸ್ಪರ ಮೆಚ್ಚುಗರು ಸ್ವಾರಸ್ಯಪೂರ್ಣವಾಗಿ ನಡೆಸಿದ ಒಂದು ಗಂಟೆಗೂ ಹೆಚ್ಚು ಕಾಲದ ಸಂಭಾಷಣೆ ಯನ್ನು ಕೇಳುವ ಭಾಗ್ಯ ನಮ್ಮದಾಗಿತ್ತು. ಆದರೆ ಅವರ ಮಾತು ಕತೆಯ ವಿವರಗಳು ನನಗೆ ಈಗ ಮರೆತೇಹೋಗಿವೆ. ದಿನಚರಿಯನ್ನು ಬರೆಯುವ ಅಭ್ಯಾಸ ಮಾಡಿಕೊಳ್ಳದೇ ಹೋದದ್ದರಿಂದಾಗಿ ನನಗಾಗಿರುವ ನಷ್ಟ ಅಷ್ಟಿಷ್ಟಲ್ಲ. ಇರಲಿ.

ಶ್ರೀ ಕುವೆಂಪು ಅವರ ಮನೆಯಿಂದ ಸ್ವಾಮಿ ರಂಗ ನಾಥಾನಂದರನ್ನು ನಾನು ಮೈಸೂರಿನ ಆಕಾಶವಾಣಿ ಕೇಂದ್ರಕ್ಕೆ ಕರೆದುಕೊಂಡು ಹೋದೆ. ನಮ್ಮ ಪ್ರಶ್ನೋತ್ತರಗಳು ಸುಮಾರು ನಲವತ್ತೈದು ನಿಮಿಷ ನಡೆದಿರಬಹುದು. ಅದರ ಧ್ವನಿಸುರುಳಿ ನನ್ನಲ್ಲಿಲ್ಲ. ಆಕಾಶವಾಣಿಯ ಭಂಡಾರದಲ್ಲಿ ಇದೆಯೋ ಏನೋ ತಿಳಿಯದು. ಒಂದು ಮುಖ್ಯವಾದ ವಿಷಯದ ಹೊರತು ಉಳಿದ ಎಲ್ಲ ವಿವರಗಳೂ ನನ್ನ ನೆನಪಿನಿಂದ ಜಾರಿಹೋಗಿವೆ. ನೆನಪಿರುವ ಆ ಒಂದು ವಿಷಯವನ್ನು ಇಲ್ಲಿ ದಾಖಲಿಸುತ್ತಿದ್ದೇನೆ.

ನಾನು : ಬಹಳ ಕಾಲದಿಂದ ನಿಮ್ಮ ಉಪನ್ಯಾಸಗಳನ್ನು ಕೇಳು ತ್ತಿದ್ದೇನೆ, ಮತ್ತು ನಿಮ್ಮ ಎಲ್ಲ ಪುಸ್ತಕಗಳನ್ನು ಆಸ್ಥೆಯಿಂದ ಓದಿದ್ದೇನೆ. ಆದರೆ ನೀವು ಜಗತ್ತಿನ ಪ್ರಮುಖ ವಿಜ್ಞಾನಿಗಳ ಅಭಿಪ್ರಾಯಗಳನ್ನೂ ಅವರು ಮಂಡಿಸಿರುವ ಸಿದ್ಧಾಂತಗಳನ್ನೂ ಹೆಚ್ಚು ಎನ್ನುವ ಪ್ರಮಾಣದಲ್ಲಿ ಉದ್ಧರಿಸುತ್ತೀರಿ, ಏಕೆ?

ಸ್ವಾಮೀಜಿ: ಇದು ವಿಜ್ಞಾನಯುಗ. ಜನ ಪ್ರತಿಯೊಂದಕ್ಕೂ ಪ್ರಮಾಣವನ್ನು, ಅದರಲ್ಲೂ ವೈಜ್ಞಾನಿಕ ಪ್ರಮಾಣವನ್ನು ಬಯಸುತ್ತಾರೆ. ಆದ್ದರಿಂದ ವಿಜ್ಞಾನವೂ ಮೂಲಭೂತವಾಗಿ ವೇದಾಂತದ ಸಿದ್ಧಾಂತಗಳ ಕಡೆಗೇ ಚಲಿಸುತ್ತಿದೆ ಎಂಬು ದನ್ನು ತೋರಿಸಿದರೆ ಜನರಿಗೆ ಭಾರತೀಯ ದರ್ಶನಗಳ ವಿಷಯದಲ್ಲಿ ಹೆಚ್ಚು ನಂಬಿಕೆ, ಗೌರವಗಳು ಮೂಡುವ ಸಾಧ್ಯತೆ ಇದೆ. ಅಲ್ಲವೆ?

ಸ್ವಾಮೀಜಿಯ ಉತ್ತರ ನನಗೆ ಒಪ್ಪಿಗೆಯಾಗಲಿಲ್ಲ. ನನ್ನ ಅಭಿಪ್ರಾಯವನ್ನು ಆದಷ್ಟು ಸಂಕ್ಷೇಪವಾಗಿ ಅವರಿಗೆ ತಲುಪಿಸಿದೆ. ನನ್ನ ವಾದದ ಸಾರವಿದು: ಸಾಪೇಕ್ಷತಾ ಸಿದ್ಧಾಂತದ ವಿಷಯದಲ್ಲಿ ನಾವು ಐನ್‌ಸ್ಟೈನ್ ಮಂಡಿಸಿರುವ ತತ್ತ್ವವನ್ನು ಒಪ್ಪಬೇಕು; ಆ ವಿಷಯದಲ್ಲಿ ಅವನದು ಅಧಿಕಾರವಾಣಿ. ಆದರೆ ದೇವರಿದ್ದಾನೆ, ಅವನು ಸರ್ವಶಕ್ತ, ಅವನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣ, ಅವನು ನಮ್ಮ ಕಷ್ಟಗಳ ಸಮಯದಲ್ಲಿ ನಮ್ಮನ್ನು ಕಾಪಾಡುತ್ತಾನೆ ಇತ್ಯಾದಿ ವಿಷಯಗಳಲ್ಲಿ ಐನ್‌ಸ್ಟೈನ್ ನಮಗೆ ಪ್ರಮಾಣ ಅಲ್ಲ. ಅವಕ್ಕೆಲ್ಲ ಪ್ರಮಾಣ ದೇವರನ್ನು ಕಂಡಿದ್ದೇನೆ ಎನ್ನುವವರು, ಅಥವಾ ಅಂಥ ವಿಷಯಗಳನ್ನು ಹೇಳುವ ಶಾಸ್ತ್ರಾದಿಗಳು. ಇವು ಎಲ್ಲ ತರ್ಕಕ್ಕಿಂತ ಹೆಚ್ಚಾಗಿ ನಂಬಿಕೆಯ ಮೇಲೆ ನಿಂತಿವೆ. ಅವನ್ನು ತಾರ್ಕಿಕಗೊಳಿಸಲು ಶಾಸ್ತ್ರಕಾರರು ಪ್ರಯತ್ನಿ ಸಿದ್ದಾರೆ. ಒಂದು ವೇಳೆ ಐನ್‌ಸ್ಟೈನ್ ದೇವರಿದ್ದಾನೆ ಎಂದು ನಾನು ನಂಬಿದ್ದೇನೆ ಎಂದರೆ ಅದು ಅವನ ನಂಬಿಕೆಯ ವಿಷಯವಾಗುತ್ತದೆ, ಅಷ್ಟೆ. ಅವನನ್ನು ನಾವು, ಅಥವಾ ನನ್ನಂಥವರು ಆಧ್ಯಾತ್ಮಿಕ ವಿಷಯಗಳಲ್ಲಿ ಪ್ರಮಾಣವಾಗಿ ಸ್ವೀಕರಿಸುವುದಿಲ್ಲ.

ಯೋಗದ ವಿಷಯದಲ್ಲಿ ನಮಗೆ ಪ್ರಮಾಣ ಪತಂಜಲಿಯೇ ಹೊರತು ಯಾವ ನೊಬೆಲ್ ಬಹುಮಾನಿತ ವಿಜ್ಞಾನಿಯೂ ಅಲ್ಲ. ಅಲ್ಲದೆ ಸ್ವಾಮಿ ವಿವೇಕಾನಂದರೇ ಈ ವಿಷಯದಲ್ಲಿ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ ಎಂಬುದನ್ನು ನಾನು ಬಲ್ಲೆ, ನೀವೂ ಬಲ್ಲಿರಿ: ಇಂಗ್ಲೆಂಡಿನಲ್ಲಿ ೧೮೯೬ರಲ್ಲಿ ಅವರು ನೀಡಿದ 'ತರ್ಕ ಮತ್ತು ಧರ್ಮ' ಎಂಬ ಉಪ ನ್ಯಾಸದಲ್ಲಿ ಅವರು ನಮ್ಮನ್ನು ಎಚ್ಚರಿಸಿದ್ದಾರೆ:

"ಪರೀಕ್ಷೆಗಳಿಗೆ ಒಳಗಾದಾಗ ಧರ್ಮವು ನಾಶ ಹೊಂದುವುದಾದರೆ ಇದುವರೆಗೂ ಅದು ವ್ಯರ್ಥವಾದ ಮೌಢ್ಯವಾಗಿತ್ತು ಎಂದರ್ಥ. ಅದು ಎಷ್ಟು ಬೇಗ ತೊಲಗು ತ್ತದೆಯೋ ಅಷ್ಟೂ ಒಳ್ಳೆಯದು. ಅದು ನಾಶವಾಗುವುದೇ ಪರಮೋತ್ಕೃಷ್ಟ ಎಂಬುದು ನನ್ನ ಭಾವನೆ. ಕಲ್ಮಶವೆಲ್ಲಾ ಹೋಗುತ್ತದೆ, ಸಾರವತ್ತಾದುದು ಉಳಿದುಕೊಳ್ಳುತ್ತದೆ. ಹಾಗಾದಾಗ ಅದು ಭೌತ ಅಥವಾ ರಸಾಯನ ಶಾಸ್ತ್ರದ

ನಿರ್ಣಯಗಳಷ್ಟೇ ವೈಜ್ಞಾನಿಕ ಎಂದಾಗುತ್ತದೆ. ಅಷ್ಟೇ ಅಲ್ಲ. ಅದಕ್ಕೆ ಹೆಚ್ಚಿನದೊಂದು ಶಕ್ತಿಯಿರುತ್ತದೆ. ಏಕೆಂದರೆ ಧರ್ಮಕ್ಕಿರುವಂತಹ ಒಂದು ಅಂತರಂಗಪ್ರಮಾಣ ಭೌತ ಅಥವಾ ರಸಾಯನಶಾಸ್ತ್ರಕ್ಕಿಲ್ಲ."

ಈ ನನ್ನ ವಾದ ಸ್ವಾಮಿ ರಂಗನಾಥಾನಂದರ ಮೇಲೆ ಏನು ಪ್ರಭಾವ ಬೀರಿತೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ ಅವರು ಇನ್ನೂ ಧರ್ಮ-ವಿಜ್ಞಾನಗಳ ಸಾಮರಸ್ಯದ ವಿಷಯವನ್ನೇ ಹೇಳುತ್ತಿದ್ದರು. ಒಂದು ಸ್ವಾರಸ್ಯ ಎಂದರೆ ಈ ಸಂದರ್ಶನ ಪ್ರಸಾರವಾಗಬೇಕಾಗಿದ್ದುದು ಕನ್ನಡ ನಾಡಿನಲ್ಲಿ ತಾನೆ? ಆದ್ದರಿಂದ ನಾನು ಕನ್ನಡದಲ್ಲೇ ಪ್ರಶ್ನೆಗಳನ್ನು ಕೇಳಿದೆ. ತಮ್ಮ ತಾರುಣ್ಯದ ದಿನಗಳನ್ನು ಮೈಸೂರಿನಲ್ಲಿ ಕಳೆದಿದ್ದ ಸ್ವಾಮೀಜಿಗೆ ನನ್ನ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಲಿಲ್ಲ. ಅವರ ಉತ್ತರಗಳ ಬಹು ಭಾಗ ಕನ್ನಡದಲ್ಲೇ ಇತ್ತು! ತೀರ ಅನಿವಾರ್ಯವಾದಾಗ ಮಾತ್ರ ಇಂಗ್ಲಿಷಿನ ಸಹಾಯ ಪಡೆಯುತ್ತಿದ್ದರು.

ನನ್ನ-ಅವರ ಬಾಂಧವ್ಯ ಇನ್ನೂ ಹತ್ತಿರವಾಗುವುದಕ್ಕೆ ಬೇರೆ ಕಾರಣಗಳೂ ಇದ್ದುವು. ಒಂದು—ನನ್ನ ಹೆಂಡತಿ ಡಾ. ಶಾಂತಾ ಬೆಂಗಳೂರು ಆಶ್ರಮದ ಪಕ್ಕದ ಮನೆಯಲ್ಲೇ ಹುಟ್ಟಿ ಬೆಳೆದದ್ದು—ಪಕ್ಕ ಎಂದರೆ ಪಕ್ಕದ ಮನೆಯೇ. ಆಶ್ರಮಕ್ಕೂ ಅವರ ಮನೆಗೂ ಮಧ್ಯೆ ತೀರ ದುರ್ಬಲವಾದ ಒಂದು ಗೋಡೆಯಿತ್ತು ಅಷ್ಟೆ. ನನ್ನ ಮಾವ ಶ್ರೀ ಡಿ.ಆರ್. ಚನ್ನೇಗೌಡರು, ಅವರ ಹೆಂಡತಿ ಶ್ರೀಮತಿ ಕೌಸಲ್ಯಾದೇವಿಯವರು ಮತ್ತು ಅವರ ಮಕ್ಕಳೆಲ್ಲ ಸ್ವಾಮೀಜಿಗೆ ತುಂಬ ಆಪ್ತರು. ಒಂದು ವಿಶೇಷವೆಂದರೆ ನಮ್ಮ ಮಾವನವರ ಮನೆಯ ಅಡಿಪಾಯವನ್ನು ಸ್ವಲ್ಪ ಮಾತ್ರ ಅಗೆದು ಗುದ್ದಲಿ-ಪೂಜೆ ಮಾಡಿದವರು ಸ್ವಾಮಿ ರಂಗನಾಥಾನಂದರು!

ಒಮ್ಮೆ ಹೀಗಾಯಿತು. ಸ್ವಾಮಿ ರಂಗನಾಥಾನಂದಜಿ ಅವರನ್ನು ನನ್ನ ಕಾರಿನಲ್ಲಿ ನಾನು ಬೆಂಗಳೂರಿನಿಂದ ಮೈಸೂರಿಗೆ ಕರೆದುಕೊಂಡು ಹೊರಟೆ. ಕಾರಿನಲ್ಲಿ ನಾವಿಬ್ಬರೇ. ಸ್ವಾಮೀಜಿ ಕೇಳಿದರು: "ಶಾಂತಿ ಮತ್ತು ನಿಮ್ಮ ಇಬ್ಬರು ಮಕ್ಕಳು ಬರುವುದಿಲ್ಲವೇ?" ನಾನು ಹೇಳಿದೆ: "ಬರುತ್ತಾರೆ ಸ್ವಾಮೀಜಿ ಬಸ್ಸಿನಲ್ಲಿ ಬರುತ್ತಾರೆ." ಸ್ವಾಮೀಜಿ ಆಶ್ಚರ್ಯದಿಂದ ಕೇಳಿದರು: "ಏಕೆ? ನಮ್ಮ ಜೊತೆ ಬರಬಹುದಿತ್ತಲ್ಲ." ನಾನು "ಸ್ವಾಮೀಜಿ, ನೀವಿದ್ದೀರಲ್ಲ, ಅದಕ್ಕೆ ಅವರನ್ನು ಬಸ್ಸಿನಲ್ಲಿ ಬರಹೇಳಿದೆ" ಎಂದೆ. ಸ್ವಾಮೀಜಿ ಬೇಸರಪಟ್ಟುಕೊಂಡು ಹೇಳಿದರು: "ತಪ್ಪು ಮಾಡಿದ್ದೀಯೆ! ಶಾಂತಿಯನ್ನು ನಾನು ಚಿಕ್ಕಂದಿನಿಂದ ಬಲ್ಲೆ. ಅವಳು ನಮ್ಮ ಜೊತೆ ಬಂದಿದ್ದರೆ ಏನಾಗುತ್ತಿತ್ತು?" ನನಗೂ ನಾನು ಮಾಡಿದ್ದು ತಪ್ಪು ಎಂದು ಹೊಳೆಯಿತು. ಸುಮ್ಮನಾದೆ.

ನನ್ನ ನಾದಿನಿ, ಶಾಂತಿಯ ತಂಗಿ ಇಂದಿರಾ ಕೃಷ್ಣ ಪೂಜ್ಯ ಯತೀಶ್ವರಾನಂದಜೀ ಅವರ ಸಲಹೆಯಂತೆ—ಅಪ್ಪಣೆ ಎನ್ನಿ—ಉದ್ಯೋಗಸ್ಥ ಮಹಿಳೆಯರಿಗಾಗಿ, ವೃದ್ಧೆಯರಿಗಾಗಿ—ಅನಂತರ ಈ ಪಟ್ಟಿಗೆ ವಿದ್ಯಾರ್ಥಿನಿಯರೂ ಸೇರಿದರು—ಒಂದು ಹಾಸ್ಟೆಲ್ ತೆರೆದರು. ಶಾರದಾ ಸೇವಿಕಾ ಮಂಡಳಿಯವರು ನಡೆಸುವ ಶಾರದಾ ಕುಟೀರ ಅದು. ಈ ವಿಷಯ ತಿಳಿದು ತುಂಬ ಸಂತೋಷಪಟ್ಟವರಲ್ಲಿ ಅಗ್ರಸ್ಥಾನದಲ್ಲಿದ್ದವರು ಸ್ವಾಮಿ ರಂಗನಾಥಾನಂದರು. ಅದರ ಕಟ್ಟಡದ ಸಹಾಯಾರ್ಥ ಶ್ರೀಮತಿ ಎಂ.ಎಸ್.ಸುಬ್ಬಲಕ್ಷ್ಮಿಯವರು ಒಂದು ಕಛೇರಿ ನಡೆಸುವುದು ಎಂದಾಯಿತು. ಅದಕ್ಕಾಗಿ ಕೋರಿಕೆ ಸಲ್ಲಿಸಿದಾಗ ಸುಬ್ಬಲಕ್ಷ್ಮಿಯವರು ಒಂದು ಕರಾರು ಹಾಕಿದರು: "ಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಅವರು ಕಛೇರಿ ಕೇಳಲು ಬರಬೇಕು." ಸ್ವಾಮೀಜಿ ಆಗ ಹೈದರಾಬಾದಿನಲ್ಲಿದ್ದರು. ಅವರು ಬರಲು ಸಂತೋಷದಿಂದ ಒಪ್ಪಿದರು. ಕಛೇರಿ ಅಮೋಘವಾಗಿತ್ತು. ಸಾಕಷ್ಟು ಹಣವೂ ಬಂತು. ಆದರೆ ರಂಗನಾಥಾನಂದಜಿ ಅಲ್ಲಿಗೆ ಬರಬೇಕು ಎಂದು ಸುಬ್ಬಲಕ್ಷ್ಮಿಯವರು ಕೇಳಿದ್ದೇಕೆ ಎಂಬುದು ನಮಗೆ ಯಾರಿಗೂ ಗೊತ್ತಾಗಲೇ ಇಲ್ಲ. ಮುಂದೆ ನನಗೆ ತಿಳಿಯಿತು. ಇಬ್ಬರು ಮಹಾನ್ ವ್ಯಕ್ತಿಗಳ ಉದಾರ ಹೃದಯವನ್ನು ಪ್ರಕಟಿಸುವುದರಿಂದ ಅತ್ಯಂತ ಸಂಕ್ಷೇಪವಾಗಿ ಆ ವಿಷಯುವನ್ನು ನಿರೂಪಿಸುತ್ತೇನೆ.

ಶ್ರೀಮತಿ ಸುಬ್ಬಲಕ್ಷ್ಮಿ ಹಾಗೂ ಅವರ ಪತಿ ಶ್ರೀ ಸದಾಶಿವಂ ಜೀವನದ ಒಂದು ಘಟ್ಟದಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿಕೊಂಡಿದ್ದರು. ಶ್ರೀಮತಿ ಸುಬ್ಬಲಕ್ಷ್ಮಿಯವರ ಎಲ್ಲೆಯಿಲ್ಲದ ಔದಾರ್ಯ ಅವರನ್ನು ಆ ಸ್ಥಿತಿಗೆ ತಂದಿತ್ತು ಎಂಬುದು ನನ್ನ ಭಾವನೆ. ಇತರ ಕಾರಣಗಳೂ ಇದ್ದಿರುವುದು ಸಾಧ್ಯ. ಇಲ್ಲಿ ಅದನ್ನು ವಿಸ್ತರಿಸುವ ಅಗತ್ಯ ಇಲ್ಲ. ಪ್ರಸ್ತುತವಾದದ್ದೆಂದರೆ ಶ್ರೀಮತಿ ಸುಬ್ಬಲಕ್ಷ್ಮಿಯವರು ಕಷ್ಟದಲ್ಲಿ ಇದ್ದಾರೆ ಎಂದು ತಿಳಿದ ಕೂಡಲೇ ಸ್ವಾಮಿ ರಂಗನಾಥಾನಂದಜೀ ಅವರು, ಶ್ರೀಮತಿ ಸುಬ್ಬಲಕ್ಷ್ಮಿಯವರಿಂದ ಯಾವ ಸೂಚನೆಯೂ ಬರದೆ, ತಾವಾಗಿ ಮುಂದುವರಿದು, ತೀರ ರಹಸ್ಯವಾದ ರೀತಿಯಲ್ಲಿ ಅವರಿಗೆ ಪ್ರತಿ ತಿಂಗಳೂ ತಕ್ಕಷ್ಟು ಹಣ ದೊರಕುವಂತೆ ಮಾಡಿದರು. ಮಹಿಳೆಯೊಬ್ಬರಿಗೆ ಮಠವಾಗಲಿ ಸಾಧುವಾಗಲಿ ಹೀಗೆ ಹಣದ ಏರ್ಪಾಡು ಮಾಡಬಹುದೆ ಎಂಬ ನೀತಿ ಸಂಹಿತೆಯ ಪ್ರಶ್ನೆ ಎದ್ದಾಗ ರಂಗನಾಥಾನಂದರು ಕೊಟ್ಟ ಉತ್ತರ ಅವರಿಗೂ ಅವರಿಂದ ನೆರವು ಪಡೆದವರಿಗೂ ಗೌರವ ತರುವಂಥದು—She is not just a person, she is the very embodiment of Indian Culture—ಎಂದರೆ ಆಕೆ ಯಾರೋ ಮಹಿಳೆಯಲ್ಲ, ಭಾರತೀಯ ಸಂಸ್ಕೃತಿಯ ಸಾಕಾರ ಸ್ವರೂಪ! ಈ ಘಟನೆ ಅಧಿಕೃತವಾಗಿ ನನಗೆ ತಿಳಿದಿದ್ದಲ್ಲ.

ನಂಬಲರ್ಹವಾದ ವ್ಯಕ್ತಿಯೊಬ್ಬರು ಹೇಳಿದ್ದು. ಹೀಗಾಗಿರುವುದು ಸಾಧ್ಯ ಎಂಬ ಭಾವನೆ ನನಗುಂಟು.

ಸ್ವಾಮಿ ರಂಗನಾಥಾನಂದಜಿಯವರು ಬೇರೊಂದು ಮಠದ ಸ್ವಾಮೀಜಿಯವರನ್ನು ನಡೆಸಿಕೊಂಡ ರೀತಿ, ಆ ಬೇರೆ ಮಠದ ಸ್ವಾಮೀಜಿಯವರು ರಂಗನಾಥಾನಂದರೊಡನೆ ನಡೆದುಕೊಂಡ ರೀತಿ ಇವನ್ನು ಪ್ರತ್ಯಕ್ಷವಾಗಿ ಕಂಡವನು ನಾನು. ಅದು ನೆನಪಿಗೆ ಬರುತ್ತಿದೆ. ಸಿರಿಗೆರೆ ಮಠದ ಅಧ್ಯಕ್ಷರು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು. ಈ ಘಟನೆ ನಡೆದಾಗ—ಸುಮಾರು ಮೂವತ್ತು ವರ್ಷಗಳ ಹಿಂದೆ—ಅವರು ಇನ್ನೂ ಚಿಕ್ಕವರು. ಏಯನ್ನಾದಲ್ಲಿ ಪಿಎಚ್.ಡಿ. ಮಾಡಿದವರು. ಮೂವತ್ತರ ಸುತ್ತಮುತ್ತ ಅವರ ವಯಸ್ಸು. ಅವರು ಬಸವೇಶ್ವರರ ಎಲ್ಲ ವಚನಗಳನ್ನೂ ತೆಲುಗಿನ ಪ್ರಸಿದ್ಧ ವಿದ್ವಾಂಸರೂ ಕವಿಯೂ ಆದ ಬಾಡಾಲ ರಾಮಕವಿ ಎನ್ನುವವರಿಂದ ತೆಲುಗಿಗೆ ಅನುವಾದ ಮಾಡಿಸಿ ಪ್ರಕಟಿಸಿದ್ದರು. ಆ ಭಾರೀ ಗ್ರಂಥದ ಪ್ರತಿಗಳೆಲ್ಲ ಮಾರಾಟವಾಗದೆ ಉಳಿದಿದ್ದವು. ನಾನು ತರಳಬಾಳು ಜಗದ್ಗುರುಗಳಿಗೆ ಹೇಳಿದೆ: "ಸ್ವಾಮೀಜಿ, ಈ ಪುಸ್ತಕಗಳನ್ನು ಸಿರಿಗೆರೆಯ ಮಠದಲ್ಲಿ ಗುಡ್ಡೆ ಹಾಕಿಕೊಂಡಿದ್ದರೆ ಬಂದ ಭಾಗ್ಯವೇನು? ಆಂಧ್ರದ ರಾಜಧಾನಿ ಹೈದರಾಬಾದಿನಲ್ಲಿ ಬಿಡುಗಡೆ ಮಾಡಿಸೋಣ. ಆ ಸಂದರ್ಭದಲ್ಲಿ ಕೆಲವು ಪುಸ್ತಕಗಳು ಮಾರಾಟವಾಗಬಹುದು." "ಹೈದರಾಬಾದಿನಲ್ಲಿ ಎಲ್ಲಿ ನಡೆಸುವುದು ಈ ಕಾರ್ಯಕ್ರಮವನ್ನು?" ಎಂದು ಕೇಳಿದರು ಸ್ವಾಮೀಜಿ. "ಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜಿ ಅವರು ರಾಮಕೃಷ್ಣ ಮಠದ ಅಧ್ಯಕ್ಷರು. ಅವರಿಗೆ ಹೇಳಿ ಏರ್ಪಾಡು ಮಾಡುತ್ತೇನೆ" ಎಂದೆ. ಅದರಂತೆ ರಂಗನಾಥಾನಂದರಿಗೆ ಬರೆದಾಗ ಅವರು ಸಂತೋಷದಿಂದ ಒಪ್ಪಿಕೊಂಡರು.

ಕಾರ್ಯಕ್ರಮ ಏರ್ಪಾಟಾಗಿದ್ದ ಹಿಂದಿನ ದಿನ ಸ್ವಾಮಿ ರಂಗನಾಥಾನಂದರು ತಮ್ಮ ಪ್ರವಚನದಲ್ಲಿ—ಅಂದು ಶಿವರಾತ್ರಿ—ಕನ್ನಡ ನಾಡಿನ ವಚನಸಾಹಿತ್ಯ ಮತ್ತು ಬಸವೇಶ್ವರರ ಆಧ್ಯಾತ್ಮಿಕ-ಧಾರ್ಮಿಕ-ಸಾಹಿತ್ಯಕ ಸಾಧನೆ ಸಿದ್ಧಿಗಳನ್ನು ಕುರಿತು ಸೊಗಸಾದ ಉಪನ್ಯಾಸ ನೀಡಿದರು. ಅವರು ಅದನ್ನೆಲ್ಲ ಯಾವಾಗ ಓದಿದ್ದರು—ಅವನ್ನೆಲ್ಲ ಹೇಗೆ ನೆನಪಿಟ್ಟುಕೊಂಡಿದ್ದರು—ಒಂದೂ ನನಗೆ ತಿಳಿಯದು. ಅವರ ನೆನಪಿನ ಶಕ್ತಿ ಎಷ್ಟು ಆಶ್ಚರ್ಯಕರವಾದದ್ದು ಎಂಬುದನ್ನು ಎಲ್ಲರೂ ಬಲ್ಲೆವಷ್ಟೆ. ಕೈಯಲ್ಲಿ ಒಂದು ಟಿಪ್ಪಣಿಯ ಹಾಳೆಯನ್ನೂ ಇಟ್ಟುಕೊಳ್ಳದೆ ನಿರರ್ಗಳವಾಗಿ ಒಂದು-ಒಂದೂಕಾಲು ಗಂಟೆ ಮಾತಿನ ಹೊಳೆಯನ್ನೇ ಹರಿಸುವ ಅವರ ವಾಗ್ಮಿತೆ ಅವರಿಗೇ ವಿಶಿಷ್ಟವಾದದ್ದು. ಭಾರತದ ಒಳಗಾಗಲಿ, ಹೊರಗಾಗಲಿ ಅವರಂತೆ ವಾಕ್ಸಿದ್ಧಿ ಪಡೆದು ಸಭೆಯ ಮೇಲೆ ಸಮ್ಮೋಹನಾಸ್ತ್ರವನ್ನು ಬೀಸಿ ಕ್ಷಣಕ್ಷಣವೂ ಜ್ಞಾನದ ದೀಪ್ತಿಯಲ್ಲಿ ಶ್ರೋತೃಗಳನ್ನು ಮೀಯಿಸುತ್ತಿದ್ದ ಮತ್ತೊಬ್ಬ ವಾಗ್ಮಿಯನ್ನು ನಾನಂತೂ ಕಂಡಿಲ್ಲ. ಅಂದಿನ ಉಪನ್ಯಾಸವೂ—ವಚನಸಾಹಿತ್ಯವನ್ನು ಕುರಿತದ್ದು—ಹಾಗೇ ಇತ್ತು. ಅಂದು ಅವರು ಮಾಡಿದ್ದು ಮರುದಿನದ ಉಪನ್ಯಾಸಗಳನ್ನು ಕೇಳಲು ಜನರ ಮನಸ್ಸನ್ನು ಸಿದ್ಧಗೊಳಿಸುವ ಕಾರ್ಯ.

ಮರುದಿನ ಸಂಜೆ ತರಳಬಾಳು ಮಠಾಧೀಶರು ಸಮಾರಂಭದ ಸಮಯಕ್ಕೆ ಅರ್ಧಗಂಟೆ ಮುಂಚೆ ಬಂದರು. ಈಗ ದೇವಾಲಯ ಇರುವ ಸ್ಥಳದಲ್ಲಿ—ಗರ್ಭಗುಡಿಯ ಮುಂದೆ ಹೊರಗೆ ಇಬ್ಬರು ಪೂಜ್ಯರ ಸಮಾಗಮ ನಡೆಯಿತು. ರಂಗನಾಥಾನಂದರು ಭಾರೀ ಹಾರ ತರಿಸಿದ್ದರು. ಅದನ್ನು ತರಳಬಾಳು ಸ್ವಾಮಿಗಳಿಗೆ ಅವರೇ ಹಾಕಿ, ಶಾಲು ಹೊದಿಸಿ ಗೌರವಿಸಿದರು. ತರಳುಬಾಳು ಬೃಹನ್ಮಠದ ಪೀಠಾಧ್ಯಕ್ಷರಾದ ಶಿವಮೂರ್ತಿ ಶಿವಾಚಾರ್ಯರು ತಾವೂ ಒಂದು ಭಾರೀ ಹಾರ ತಂದಿದ್ದರು. ಅದನ್ನು ರಂಗನಾಥಾನಂದಜಿ ಅವರ ಕೊರಳಿಗೆ ಹಾಕಿ ಸ್ವಾಮೀಜಿಯ ಕಾಲು ಮುಟ್ಟಿ ನಮಸ್ಕರಿಸಿದರು. ಉತ್ತಮೋತ್ತಮ ಸಂಸ್ಕೃತಿಯ ಅವಳಿ-ಜವಳಿಗಳು ಪರಸ್ಪರರನ್ನು ಗೌರವಿಸಿದ್ದನ್ನು ಕಂಡು ನನ್ನ ಕಣ್ಣುಗಳು ಹನಿಗೂಡಿದುವು. ಸಭೆಯಲ್ಲಿ ಸ್ವಾಮಿ ರಂಗನಾಥಾನಂದರು ನನ್ನ ಬಗ್ಗೆ ತುಂಬ ಒಳ್ಳೆಯ ಮಾತುಗಳನ್ನು ಹೇಳಿದರು. ಅವರು ನನಗೆ ಸೂಚನೆ ಕೊಟ್ಟಿದ್ದಂತೆ ನನ್ನ ಭಾಷಣವನ್ನು—ತೆಲುಗಿನಲ್ಲಿ ಬರೆದಿದ್ದನ್ನು ಓದಿದೆ.

ಇದೇ ವರ್ಷ ಮಾರ್ಚ್ ತಿಂಗಳ ೧೧ರಿಂದ ೨೫ರವರೆಗೆ ನಾನೂ ನನ್ನ ಪ್ರಿಯ ಮಿತ್ರರಾದ ಸ್ವಾಮಿ ಸುರೇಶಾನಂದರೂ ಬೇಲೂರು ಮಠದ ಸುತ್ತಮುತ್ತ ಓಡಾಡಿ ಬಂದೆವು. ನಾವು ಅಲ್ಲಿಗೆ ಹೋಗುವ ಏರ್ಪಾಟು ನಡೆಯುತ್ತಿದ್ದುದನ್ನು ಕೇಳಿದ್ದ ನಮ್ಮ ಇನ್ನೊಬ್ಬ ಮಿತ್ರರು ಸ್ವಾಮಿ ಕಮಲಾನಂದರು ಬೇಲೂರು ಮಠದಿಂದ ನಮಗೆ ಫೋನ್ ಮಾಡಿ ಹೇಳಿದ್ದರು: "ಪ್ರೆಸಿಡೆಂಟ್ ಮಹಾರಾಜರನ್ನು ನೋಡಲು ನೀವು ಬರುತ್ತಿದ್ದರೆ ಬೇಗ ಬನ್ನಿ. ಅವರ ಆರೋಗ್ಯ ಸ್ವಲ್ಪವೂ ಚೆನ್ನಾಗಿಲ್ಲ." ಅನಾರೋಗ್ಯ ಅವರ ಜೀವದ ಗೆಳೆಯ. ಅಂಥ ಸ್ಥಿತಿಯಲ್ಲೇ ರಂಗನಾಥಾನಂದಜಿ ಅನೇಕಾನೇಕ ಬಾರಿ ವಿಶ್ವ ಪರ್ಯಟನ ಮಾಡಿ, ಭಾರತದ ಒಳಗೂ ಹೊರಗೂ ವೇದಾಂತವನ್ನೂ ರಾಮಕೃಷ್ಣ-ವಿವೇಕಾನಂದರ ಯುಗಪ್ರವರ್ತಕ ಸಂದೇಶವನ್ನೂ ಅತ್ಯಂತ ಪರಿಣಾಮಕಾರಿಯಾಗಿ ಪೂರ್ವ-ಪಶ್ಚಿಮಗಳ ಆಸಕ್ತ ಶ್ರೋತೃಗಳಿಗೆ ಯಶಸ್ವಿಯಾಗಿ ತಲುಪಿಸಿದ್ದರು. ವಿವೇಕಾನಂದರ ಅನಂತರ ವೇದಾಂತ ಡಿಂಡಿಮವನ್ನು ಪೂರ್ವಪಶ್ಚಿಮ ಗೋಳಗಳಲ್ಲಿ ಅವರಷ್ಟು ಉತ್ಸಾಹದಿಂದ ಬೋಧಿಸಿದ ಇನ್ನೊಬ್ಬರ ಹೆಸರು ಹೊಳೆಯುತ್ತಿಲ್ಲ.

ಸ್ವಾಮೀಜಿಯನ್ನು ನಾವು ಎರಡು ಸಲ ಭೇಟಿ ಮಾಡಿದೆವು. ಅದೇ ಉತ್ಸಾಹದ ಬುಗ್ಗೆ. ಅವರ ನೆನಪಿನ ಶಕ್ತಿ ಏನಾಗಿದೆಯೋ ಎಂದುಕೊಂಡಿದ್ದೆವು. ಆದರೆ ನಮ್ಮಿಬ್ಬರನ್ನೂ ಗುರುತು ಹಿಡಿದು ಮಾತನಾಡಿಸಿದರು. ಅಷ್ಟೇ ಅಲ್ಲ – 'How is Channe Gowda's daughter?" ಚನ್ನೇಗೌಡರ ಮಗಳು ಹೇಗಿದ್ದಾರೆ ಎಂದು ಕೇಳಿದರು—ಅವರಿಗೆ ಹೆಸರು ಮರೆತುಹೋಗಿತ್ತು. 'Is it Indira Krishna? ಇಂದಿರಾ ಕೃಷ್ಣ ಅವರೇ ಎಂದು ಕೇಳಿದೆ. Yes, yes,—ಹೌದು ಹೌದು ಎಂದರು. She is fine—ಅವರು ಚೆನ್ನಾಗಿದ್ದಾರೆ ಎಂದೆ. ಆ ಕುಟುಂಬದ ಮೇಲೆ ಅವರ ವಾತ್ಸಲ್ಯವನ್ನು ನೋಡಿ ಬೆರಗಾದೆ. ಆಗಷ್ಟೆ ಪ್ರಕಟವಾಗಿದ್ದ ಬೃಹದಾರಣ್ಯಕೋಪನಿಷತ್ತಿನ ಅವರದೇ ವ್ಯಾಖ್ಯಾನವನ್ನು ಮಲಗಿಕೊಂಡೇ ಆಸ್ಥೆಯಿಂದ ಓದುತ್ತಿದ್ದರು. ಪುಸ್ತಕವನ್ನು ತೋರಿಸಿ 'This is super-science' ಇದು ವಿಜ್ಞಾನವನ್ನು ಮೀರಿದ್ದು ಎಂದರು! ಬಹುಶಃ ಅದೇ ಅವರು ನಮ್ಮೊಂದಿಗೆ ಆಡಿದ ಕೊನೆಯ ವಾಕ್ಯ. ಏಕೆಂದರೆ ನಾನು ವಾದಕ್ಕಿಳಿಯಲಿದ್ದೆ. ಅಷ್ಟರಲ್ಲಿ ನಾವು ಮಾತು ನಿಲ್ಲಿಸಬೇಕೆಂದು ಸನ್ನೆ ಮಾಡಿದ ಅವರ ಸೇವಕರಿಗೆ ಭಯಪಟ್ಟು ಅಲ್ಲಿಂದ ಹೊರಟೆವು.

ಇಪ್ಪತ್ತನೆಯ ಶತಮಾನದಲ್ಲಿ ಸ್ವಾಮಿ ರಂಗನಾಥಾನಂದಜಿ ಅವರಂತಹ ಇನ್ನೊಬ್ಬರು ವ್ಯಕ್ತಿ ಇದ್ದರೇ? ಅವರ ಗುಣಗಳ ಮಾಲೆಯನ್ನು ಮತ್ತೊಮ್ಮೆ ತಿರುಗಿಸುತ್ತಾ ಒಂದೊಂದು ಮಣಿಯನ್ನೂ, ಅದರ ಹೊಳಪನ್ನೂ ಮತ್ತೊಮ್ಮೆ ನೆನೆಯುತ್ತಿದ್ದೇನೆ. ಪೂರ್ವಪಶ್ಚಿಮ ತತ್ತ್ವಶಾಸ್ತ್ರ ಶಾಖೆಗಳಲ್ಲಿ ಪ್ರಕಾಂಡ ಪಾಂಡಿತ್ಯ, ವ್ಯಾಕರಣಬದ್ಧವಾದ ಆದರೆ ಕಾವ್ಯಮಯವಾದ ಇಂಗ್ಲಿಷಿನ ಮೇಲೆ ಪ್ರಭುತ್ವ, ಅಸ್ಖಲಿತವಾದ, ತುಂಬಿದ ನದಿಯಂತೆ ಹರಿಯುತ್ತಿದ್ದ ವಾಕ್ಪ್ರವಾಹ, ಶ್ರೀರಾಮಕೃಷ್ಣರು, ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆ ಶಾರದಾದೇವಿಯವರ ಬದುಕು, ಉಪದೇಶಗಳಲ್ಲಿ ಅಚಲವಾದ ಶ್ರದ್ಧೆ, ಪೂರ್ವಪಶ್ಚಿಮಗಳ ತತ್ತ್ವಶಾಸ್ತ್ರ, ಮನೋವಿಜ್ಞಾನ ಇವುಗಳ ಬೆಳಕಿನಲ್ಲಿ ಮೇಲೆ ಹೇಳಿದ ದಿವ್ಯತ್ರಯರ ಸಂದೇಶಗಳನ್ನು ಸಮರ್ಪಕವಾಗಿ ವ್ಯಾಖ್ಯಾನಿಸುತ್ತಿದ್ದ ಶಕ್ತಿ, ಇತರ ವ್ಯಕ್ತಿಗಳ ಜೀವನದಲ್ಲಿ ಆಸಕ್ತಿ, ಅವರ ನೋವುನಲಿವುಗಳಿಗೆ ಸಹಸ್ಪಂದನ, ಈ ಎಲ್ಲ ಗುಣಗಳ ಜೊತೆಗೆ ಅವರು ನಡೆಸುತ್ತಿದ್ದ ಸರಳ ಜೀವನ, ಕಾಡುತ್ತಿದ್ದ ಅನಾರೋಗ್ಯದ ನಡುವೆ, ನುಂಗಬೇಕಾಗಿದ್ದ ಔಷಧಗಳ ಸಂಖ್ಯೆಯನ್ನು ಗಮನಿಸದೆ ಅವರು ತಾಳಿದ್ದ ಸಮಾಧಾನದ ಮುಖಮುದ್ರೆ, ಮಾನವತೆಯ ಉದ್ಧಾರವಿರುವುದು ರಾಮಕೃಷ್ಣರ ಸಮನ್ವಯ ಮಂತ್ರದಿಂದ, ವಿವೇಕಾನಂದರ ಸೇವಾದೀಕ್ಷೆಯಿಂದ, ಶಾರದಾದೇವಿಯವರ ಕೃಪಾನುಕಂಪೆಯಿಂದ ಎಂಬುದರಲ್ಲಿ ಅಚಲವಾದ ವಿಶ್ವಾಸ–ಎಲ್ಲಕ್ಕಿಂತ ದೊಡ್ಡದಾಗಿ, ಸಿನಿಕತೆಯ ಸೋಂಕು ಎಳ್ಳಷ್ಟೂ ಇಲ್ಲದ ಗುಣಪಡಿಸಲಾಗದ ಆಶಾವಾದ–ಈ ಎಲ್ಲ ಮೇಳೈಸಿರುವ ಏಕೈಕ ವ್ಯಕ್ತಿ ನಾನು ಕಂಡದ್ದು–ಪರಮಪೂಜ್ಯ ಶ್ರೀಮತ್ ಸ್ವಾಮಿ ರಂಗನಾಥಾನಂದಜೀ ಅವರು. ರಾಮಕೃಷ್ಣರು, ವಿವೇಕಾನಂದರು, ಶಾರದಾದೇವಿಯವರು, ಬುದ್ಧ ಬಸವರು—ಇಂಥವರ ಆತ್ಮಕ್ಕೆ ಹೇಗೋಹಾಗೆ ರಂಗನಾಥಾನಂದರ ಆತ್ಮಕ್ಕೆ ಶಾಂತಿ ಇರುವುದು ಬೇಡ! ಏಕೆಂದರೆ ಅವರ ಆತ್ಮ ಶಾಂತವಾದರೆ ನಮ್ಮಂತಹ ಅಶಾಂತಾತ್ಮರಿಗೆ ಶಾಂತಿ ನೀಡುವವರು ಯಾರು?

## ಶ್ರೀಮಾತೆಯ ಸಂದೇಶದ ನಿತ್ಯಸ್ಮರಣೆ

ಪೂಜ್ಯ ರಂಗನಾಥಾನಂದಜಿ ಹೈದರಾಬಾದಿನಲ್ಲಿರುವ ಆಶ್ರಮದ ಅಧ್ಯಕ್ಷರಾಗಿದ್ದಾಗ ಪ್ರತಿನಿತ್ಯ ಊಟ ಮಾಡುವ ಮುಂಚೆ ಊಟದ ಮನೆಯಲ್ಲಿ "ಮಗು! ಯಾರಲ್ಲೂ ದೋಷವನ್ನು ನೋಡಬೇಡ. ದೋಷ ನೋಡುವುದಾದರೆ ನಿನ್ನಲ್ಲಿರುವ ದೋಷಗಳನ್ನೇ ನೋಡಿಕೋ. ಯಾರೂ ಪರಕೀಯರಲ್ಲ" ಎಂಬ ಶ್ರೀಮಾತೆ ಶಾರದಾದೇವಿಯವರ ಕಡೆಯ ಸಂದೇಶವನ್ನು ಓದಿಸುತ್ತಿದ್ದರು.

## ಮೌಲ್ಯಪ್ರಜ್ಞೆಯ ಜಾಗೃತಿ

ಶಾಸಕರಿಗೆ, ಆಡಳಿತವರ್ಗದವರಿಗೆ ಉತ್ತಮ ವಿಚಾರಗಳು ತಲುಪಬೇಕೆಂಬ ತೀವ್ರ ತುಡಿತವಿತ್ತು ಪೂಜ್ಯರಿಗೆ. ಅವರ ಹಲವಾರು ಉಪನ್ಯಾಸಗಳು ಶಾಸನ ಹಾಗು ಆಡಳಿತ ವರ್ಗಗಳಲ್ಲಿ ಮೌಲ್ಯಗಳು ಎಂಬ ವಿಷಯ ಕುರಿತಾಗಿತ್ತು. ಅದೇ ಶೀರ್ಷಿಕೆಯ ಅವರ ಪುಸ್ತಕವನ್ನು ಆಂಗ್ಲಭಾಷೆಯಲ್ಲಿ ಹಾಗೂ ಕನ್ನಡ, ಹಿಂದಿ, ಬಂಗಾಳಿಯಲ್ಲಿ ಪ್ರಕಟಿಸಿ ಉಚಿತವಾಗಿ ತಮ್ಮ ಕೈಯಿಂದಲೇ ಹಣಹಾಕಿ ವಿತರಿಸುತ್ತಿದ್ದರು. ಆಡಳಿತ ವರ್ಗದವರು ಆ ಪುಸ್ತಕದಲ್ಲಿನ ವಿಚಾರಗಳನ್ನು ಓದಿ ಮೌಲ್ಯಪ್ರಜ್ಞೆ ಬೆಳೆಸಿಕೊಳ್ಳಲಿ ಎಂಬ ಆಶಯ ಅವರದಾಗಿತ್ತು. ಅಂತೆಯೇ ಆದರ್ಶ ಗೃಹಸ್ಥ, ಆದರ್ಶ ನಾಗರಿಕ ಎಂಬ ಉಪನ್ಯಾಸ ಹಾಗು ಪುಸ್ತಕಗಳ ಮೂಲಕ ಜನಸಾಮಾನ್ಯರಿಗೆ ಉದಾತ್ತ ವಿಚಾರಗಳನ್ನು ತಲುಪಿಸುವ ಪ್ರಯತ್ನ ಅವರದಾಗಿತ್ತು.